ಆ) ಮ್ಯಾನೇಜ್‌ಮೆಂಟ್ ಸೀಟಿನಲ್ಲಿ ಹರಿಜನ ಗಿರಿಜನರಿಗೆ 18ಶೇಕಡಾ, ವಿದ್ಯಾರ್ಥಿಗಳಿಗೆ ಸೀಟನ್ನು ಕೊಡದಿದ್ದರೆ ಇದು ಹರಿಜನ ಗಿರಿಜನರ ಮಕ್ಕಳಿಗೆ ಅನ್ಯಾಯ ಮಾಡಿದಂತೆ ಆಗಲಿಲ್ಲವೇ?

ಇ) ಈ ರೀತಿಯಾಗುತ್ತಿರುವ ಅನ್ಯಾಯವನ್ನು ಸರ್ಕಾರ (ಹರಿಜನ - ಗಿರಿಜನ ಮಕ್ಕಳಿಗೆ) ಯಾವ ರೀತಿ ತಡೆಯುವುದು ಹಾಗೂ ಮುಂದೆ ಸರಿಪಡಿಸಲಾಗುವುದು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

**1990-91ನೇ ಸಾಲಿನಲ್ಲಿ ಹೆಚ್ಚಿಗೆ ಕೊಟ್ಟ ಮೆಡಿಕಲ್ ಸೀಟು**

1502 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿಗೆ ಸರ್ಕಾರದಿಂದ ಮೆಡಿಕಲ್ ಕಾಲೇಜುಗಳಿಗೆ ಎಷ್ಟು ಹೆಚ್ಚಿಗೆ ಸೀಟುಗಳನ್ನು ಕೊಡಲಾಗುವುದು?

ಆ) ಇದರಲ್ಲಿ ಸರ್ಕಾರದ ಕಾಲೇಜುಗಳು ಎಷ್ಟು ಮತ್ತು ಖಾಸಗೀ ಕಾಲೇಜುಗಳು ಎಷ್ಟು(ಹೆಸರುಗಳೊಂದಿಗೆ ವಿವರಣೆಯನ್ನು ಕೊಡಿ)?

ಇ) 1989-90, 1990-91ನೇ ಸಾಲಿನ ಎಷ್ಟು ಸರ್ಕಾರಿ ಹಾಗೂ ಖಾಸಗೀ ಕಾಲೇಜಿನಲ್ಲಿ ಹೆಚ್ಚಿಗೆ ಸೀಟುಗಳನ್ನು ಕೊಡಲಾಗಿರುವುದು (ವಿವರಗಳನ್ನು ಒದಗಿಸುವುದು.)?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) :

ಅ) 225 ಸೀಟುಗಳನ್ನು ಹೆಚ್ಚಿಗೆ ಕೊಡಲಾಗಿದೆ.

ಆ) ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಮಾತ್ರ ಸೀಟುಗಳನ್ನು ಹೆಚ್ಚಿಸಲಾಗಿದೆ. ವಿವರಗಳು ಈ ಕೆಳಗಿನಂತಿದೆ,

| | |
|---|---|
| 1) ಕೆ.ಎಂ.ಸಿ. ಮಂಗಳೂರು | 50 |
| 2) ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ | 50 |
| 3) ಬಿ.ಎಲ್.ಡಿ.ಇ. ವೈದ್ಯಕೀಯ ಕಾಲೇಜು, ಬಿಜಾಪುರ | 30 |
| 4) ಎಂಆರ್ ವೈದ್ಯಕೀಯ ಕಾಲೇಜು, ಗುಲ್ಬರ್ಗಾ | 25 |
| 5) ದೇವರಾಜ್ ಅರಸ್ ವೈದ್ಯಕೀಯ ಕಾಲೇಜು, ಕೋಲಾರ | 20 |
| 6) ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು | 25 |
| 7) ಆದಿಚುಂಚನಗಿರಿ ವೈದ್ಯಕೀಯ ಕಾಲೇಜು, ಬೆಳ್ಳೂರು | 25 |
| | 225 |

ಇ)

| ಸರ್ಕಾರಿ ವೈದ್ಯಕೀಯ ಕಾಲೇಜು | 89-90 | 90-91 |
|---|---|---|
| 1) ಬೆಂಗಳೂರು ವೈದ್ಯಕೀಯ ಕಾಲೇಜು, ಬೆಂಗಳೂರು | 45 | – |
| 2) ಮೈಸೂರು ವೈದ್ಯಕೀಯ ಕಾಲೇಜು, ಮೈಸೂರು | 40 | – |
| | 85 | |

ಖಾಸಗೀ ವೈದ್ಯಕೀಯ ಕಾಲೇಜು

| | | |
|---|---|---|
| 1) ಬಿಎಲ್‌ಡಿಇ ವೈದ್ಯಕೀಯ ಕಾಲೇಜು, ಬಿಜಾಪುರ | 30 | 30 |
| 2) ಜೆಜೆಎಂ ವೈದ್ಯಕೀಯ ಕಾಲೇಜು, ದಾವಣಗೆರೆ | 50 | 50 |
| 3) ಕೆಎಂಸಿ, ಮಂಗಳೂರು | 50 | 50 |
| 4) ಆದಿಚುಂಚನಗಿರಿ ವೈದ್ಯಕೀಯ ಕಾಲೇಜು, ಬೆಳ್ಳೂರು | 25 | 25 |
| 5) ದೇವರಾಜ್ ಅರಸ್ ವೈದ್ಯಕೀಯ ಕಾಲೇಜು, ಕೋಲಾರ | 10 | 20 |
| 6) ಜೆಎಸ್‌ಎಸ್ ವೈದ್ಯಕೀಯ ಕಾಲೇಜು, ಮೈಸೂರು | 50 | – |
| 7) ಜೆಎನ್ ವೈದ್ಯಕೀಯ ಕಾಲೇಜು, ಬೆಳಗಾಂ | 20 | – |
| 8) ಎಂಆರ್ ವೈದ್ಯಕೀಯ ಕಾಲೇಜು, ಗುಲ್ಬರ್ಗಾ | – | 25 |
| 9) ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು | – | 25 |
| | 235 | 225 |

**ಸಿದ್ಧಾರ್ಥ ಖಾಸಗಿ ಮೆಡಿಕಲ್ ಕಾಲೇಜು ಬಗ್ಗೆ.**

1501 - ಶ್ರೀ ಕರಿಯಣ್ಣ (ಹೊಳಲ್ಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿನ ಸಿದ್ಧಾರ್ಥ ಖಾಸಗಿ ಮೆಡಿಕಲ್ ಕಾಲೇಜು ಯಾವಾಗ ಸ್ಥಾಪನೆಯಾಯಿತು?

ಆ) ಇದರ ಸೀಟಿನ ಸಂಖ್ಯೆ ಎಷ್ಟು?

ಇ) ಇದಕ್ಕೆ ಸರ್ಕಾರ ಮಾನ್ಯತೆ ಕೊಟ್ಟಿದಿಯೇ?

ಈ) ಇದು ಸ್ಥಾಪನೆಯಾದಾಗಿನಿಂದ ಆಯಾ ವರ್ಷಕ್ಕೆ ಅನುಗುಣವಾಗಿ ಸರ್ಕಾರಿ ಸೀಟು ಎಷ್ಟು ಕೊಟ್ಟಿರುತ್ತಬೆ (ಮೆರಿಟ್ ಮಕ್ಕಳಿಗೆ)?

ಉ) ಇದರಲ್ಲಿ ಸರ್ಕಾರದಿಂದ ಎಷ್ಟು ಜನ ಹರಿಜನ ಗಿರಿಜನ ಮಕ್ಕಳಿಗೆ ಮೆರಿಟ್ ಆಧಾರದ ಮೇಲೆ ಸೀಟನ್ನು ನೀಡಿರುತ್ತಾರೆ?

ಊ) ಸರ್ಕಾರದ ಸೀಟುಗಳನ್ನು ಬಿಟ್ಟು ಈ ವಿದ್ಯಾ ಸಂಸ್ಥೆಯ ಸೀಟಿನಿಂದ ಹರಿಜನ-ಗಿರಿಜನರಿಗೆ ಇದು ಸ್ಥಾಪನೆಯಾದಾಗಿನಿಂದ ಆಯಾ ವರ್ಷ (ಪ್ರತಿ ವರ್ಷ) ಎಷ್ಟು ಮಕ್ಕಳಿಗೆ ಸಂಸ್ಥೆಯ ಸೀಟುಗಳನ್ನು ಕೊಟ್ಟಿರುತ್ತದೆ. ಇವರ ಹೆಸರು, ಜಾತಿ ಮತ್ತು ಜಿಲ್ಲೆಯ ಮತ್ತು ರಾಜ್ಯದ ಹೆಸರು ಮತ್ತು ಇದರಲ್ಲಿ ನಮ್ಮ ರಾಜ್ಯದ ಹರಿಜನ-ಗಿರಿಜನ ಮಕ್ಕಳಿಗೆ ಎಷ್ಟು ಸೀಟು ಕೊಟ್ಟಿರುತ್ತೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 1988ನೇ ಜುಲೈ ತಿಂಗಳು

ಆ) 175

ಇ) ಹೌದು

ಈ) 1989 - 26
1990 - 22

ಉ)

| | ಎಸ್‌ಸಿ | ಎಸ್‌ಟಿ |
|---|---|---|
| 1989-90 | 4 | 1 |
| 1990-91 | 5 | – |

ಊ) ಪ್ರತ್ಯೇಕ ಪಟ್ಟಿಯನ್ನು ಲಗತ್ತಿಸಿರುತ್ತದೆ (ಅನುಬಂಧ 1)